ಓ ಎಸ್ ನಂ **111/2017**

ಪಿ. ಡಬ್ಲ್ಯೂ ಃ **3**

ದಿಃ **11.07.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಕೆ ಎಸ್ ವಕೀಲರಿಂದಃ

ದಾವಾ ಸ್ವತ್ತು ಸ.ನಂ. **161/1** ಆಗಿರುತ್ತದೆ. ಅದರ ವಿಸ್ತೀರ್ಣ ನನಗೆ ಸರಿಯಾಗಿ ಗೊತ್ತಿರುವುದಿಲ್ಲ, ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ. ದಾವಾ ಸ್ವತ್ತು ಗುಮ್ಮಸಂದ್ರ ರಸ್ತೆಯಲ್ಲಿರುತ್ತದೆ. ದಾವಾ ಸ್ವತ್ತಿನಲ್ಲಿ ಮೀನಾಕ್ಷಮ್ಮ ನವರು ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂದಪಟ್ಟ ಕಂದಾಯ ದಾಖಲಾತಿಗಳನ್ನು ನಾನು ನೋಡಿಲ್ಲ. ಈ ದಾವೆಯನ್ನು ಹೂಡಿದವರು ನನ್ನ ಮಾವ ಆಗಿರುತ್ತಾರೆ. ವಾದಿ ಹೊಸಪೇಟೆಯಲ್ಲಿ ವಾಸವಾಗಿರುತ್ತಾರೆ. ದಾವಾ ಸ್ವತ್ತು ನಾಗಯ್ಯನವರ ಹೆಸರಿನಲ್ಲಿರುತ್ತದೆ. ನಾಗಯ್ಯ ನವರ ಹೆಸರಿನಲ್ಲಿ ಇದ್ದ ಕಂದಾಯ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ.

ದಾವಾ ಸ್ವತ್ತು ಯಲ್ಲಪ್ಪ ನವರಿಗೆ ಮಂಜೂರಾದ ಸಮಯದಲ್ಲಿ ಮೀನಾಕ್ಷಮ್ಮ ನವರು ಸ್ವಾಧೀನದಲ್ಲಿದ್ದರು ಎಂದರೆ ಗೊತ್ತಿಲ್ಲ. ನಾನು ಯಲ್ಲಯ್ಯ ನವರಿಗೆ ದಾವಾ ಸ್ವತ್ತು ಮಂಜೂರಾಗಿರುವ ದಾಖಲಾತಿಗಳನ್ನು ನೋಡಿರುವುದಿಲ್ಲ. ಸದರಿ ಮಂಜೂರಾತಿ ಆದೇಶದಲ್ಲಿ ಯಲ್ಲಯ್ಯ ನವರಿಗೆ ಮಂಜೂರಾಗಿರುತ್ತದೆ ಎಂದು ಎಲ್ಲೂ ಬರೆದಿಲ್ಲ ಎಂದರೆ ಗೊತ್ತಿಲ್ಲ. ದಾವಾ ಪ್ರತಿವಾದಿ **9** ರವರು ದಾವಾ ಪ್ರತಿವರಾದಿ **1** ರವರ ಮೇಲೆ ಓ ಎಸ್ **155/2003** ರಲ್ಲಿ ಹೂಡಿರುವ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ಯಲ್ಲಯ್ಯ ನವರು ಸದರಿ ದಾವೆಯಲ್ಲಿ **9** ನೆ ಪ್ರತಿವಾದಿಯೊಂದಿಗೆ ರಾಜಿಯಾಗುತ್ತ **9** ನೆ ಪ್ರತಿವಾದಿ ರವರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದು ಹೇಳಿಕೆ ನೀಡಿರುತ್ತಾರೆ ಎಂಬ ವಿಷಯ ನನಗೆ ಗೊತ್ತಿರುತ್ತದೆ.

ದಾವಾ ಸ್ವತ್ತಿನಲ್ಲಿ ಮೀನಾಕ್ಷಮ್ಮನವರೇ ಸ್ವಾಧೀನದಲ್ಲಿದ್ದು, ಅವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಇರುತ್ತವೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ

**ಓ ಎಸ್ ನಂ 111/2017**
**ಪಿ. ಡಬ್ಲ್ಯೂ : 4**
**ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎನ್ ಕೆ ಎಸ್ ವಕೀಲರಿಂದ :**

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಇರುವ ವಿಚಾರಗಳನ್ನು ನಮ್ಮ ವಕೀಲರಿಗೆ ಯಲ್ಲಪ್ಪ ನವರು ಹೇಳಿರಬಹುದು. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ ಎಂದರೆ ನನಗೆ ಎಲ್ಲ ವಿಚಾರ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ.

ನಾನು ದಾವಾ ಸ್ವತ್ತನ್ನು ನೋಡಿರುತ್ತೇನೆ ಅದರ ಸ.ನಂ. 126/1 ಆಗಿದ್ದು 2 ಎಕರೆ 31 ಗುಂಟೆ ಜಮೀನು ಇರುತ್ತದೆ. ದಾವಾ ಸ್ವತ್ತು ಗುಮ್ಮಸಂದ್ರ ರಸ್ತೆಯಲ್ಲಿ ಇರುತ್ತದೆ. ದಾವಾ ಸ್ವತ್ತಿಗೆ ಸಂಬಂದಪಟ್ಟ ಪಹಣಿಗಳನ್ನು ನಾನು ನೋಡಿರುತ್ತೇನೆ. ಕಂದಾಯ ದಾಖಲಾತಿಗಳಲ್ಲಿ ಮೀನಾಕ್ಷಮ್ಮ ನವರ ಹೆಸರಿಗೆ ಎಷ್ಟು ವರ್ಷಗಳಿಂದ ಬರುತ್ತಿದೆ ಎಂದು ನನಗೆ ಗೊತ್ತಿಲ್ಲ. ಮೀನಾಕ್ಷಮ್ಮ ನವರು ದಾವಾ ಸ್ವತ್ತಿನಲ್ಲಿ ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತು ಯಾರಿಗೆ ಮಂಜೂರಾಗಿತ್ತು ಎಂದರೆ ನಾಗಯ್ಯ ನವರಿಗೆ ಮಂಜೂರಾಗಿತ್ತು ಎಂದು ನುಡಿಯುತ್ತಾರೆ. ನಾನು ನಾಗಯ್ಯ ನವರ ಹೆಸರಿನಲ್ಲಿ ಮಂಜೂರಾಗಿರುವ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ನಾಗಯ್ಯ ನವರ ಹೆಸರಿನಲ್ಲಿ ಯಲ್ಲಯ್ಯ ನವರ ಹೆಸರಿಗೆ ದಾವಾ ಸ್ವತ್ತು ಆಗಿರುತ್ತದೆ. ನಾಗಯ್ಯ ನವರಿಂದ ಯಲ್ಲಯ್ಯ ನವರಿಗೆ ಪೌತಿ ಖಾತೆಯಾಗಿರುತ್ತದೆ. ಮೀನಾಕ್ಷಮ್ಮ ನವರು ಸ್ವಾಧೀನದಲ್ಲಿದ್ದ ಸಮಯದಲ್ಲಿ ಯಲ್ಲಯ್ಯ ನವರು ದಾವಾ ಸ್ವತ್ತಿನ ಮಂಜೂರಾತಿಗೆ ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ. ಮಂಜೂರಾತಿ ಆದೇಶದಲ್ಲಿ ಒಟ್ಟು ಕುಟುಂಬಕ್ಕೆ ದಾವಾ ಸ್ವತ್ತು ಮಂಜೂರಾದ ಹಾಗೇ ಬರೆದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ 155/2003 ದಾವೆಯನ್ನು ಮೀನಾಕ್ಷಮ್ಮ ನವರು ಯಲ್ಲಯ್ಯ ನವರ ವಿರುದ್ದ ಸಲ್ಲಿಸಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆ ರಾಜಿಯಾಗಿದ್ದು ಆ ದಾವೆಯಲ್ಲಿ ಮೀನಾಕ್ಷಮ್ಮ ನವರು ಸ್ವಾಧೀನದಲ್ಲಿರುತ್ತಾರೆ ಎಂದು ಯಲ್ಲಯ್ಯ ನವರು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದ ಆದೇಶದಂತೆ ಕಂದಾಯ ದಾಖಲಾತಿಗಳು ಮೀನಾಕ್ಷಮ್ಮ ನವರ ಹೆಸರಿನಲ್ಲಿ ಇರುತ್ತವೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಮೀನಾಕ್ಷಮ್ಮ ನವರ ಸ್ವಾಧೀನದಲ್ಲಿರುತ್ತಾರೆ, ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

ಮಾಗಡಿ